**ECA 22-23** **RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 02.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ M V S, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

3. ಕಳೆದ ಬಾರಿ ಓ ಡಿ ಕ್ಲೇಮ ಸರ್ವೆ ವರದಿ ಹಾಜರಪಡಿಸುತ್ತೇನೆ ಅಂತಾ ಹೇಳಿದ್ದು ಏಕೆ ಹಾಜರಪಡಿಸಿಲ್ಲವೆಂಬ ವಕೀಲರ ಪ್ರಶ್ನೆಗೆ " ನಾನು ಓಡಿ ಕ್ಲೇಮ ಬಗ್ಗ ಒಪ್ಪಿಕೊಳ್ಳತ್ತೇನೆ . ಓ ಡಿ ಕ್ಲೇಮ ಹಾಗೂ 3 ನೇ ಪಕ್ಷಗಾರರ ಕ್ಲೇಮ ಬೇರೆ ಸದರಿ ದಾಖಲೆಗಳನ್ನು ಹಾಜರಪಡಿಸುವ ಅಧಿಕಾರ ಇಲ್ಲ. ಕಳೆದ ದಿಃ 7.1.2026 ರಂದು ನಾನು ಪ್ರಮಾಣ ವಚನ ಸ್ವೀಕಾರ ಕ್ಲೇಮ ಫಾರ್ಮ ಹಾಗೂ ಸರ್ವೆ ವರದಿಗಳನ್ನು ಮುಂದಿನ ವಿಚಾರಣೆ ದಿನಾಂಕದಿಂದ ಹಾಜರಪಡಿಸುತ್ತೇನೆ ಅಂತಾ ಸಾಕ್ಷಿ ನುಡಿಯುತ್ತಿದ್ದೇನೆ. ಒಂದು ವೇಳೆ ಅಧಿಕಾರವಿಲ್ಲದಿದ್ದರೆ ಏಕೆ ನ್ಯಾಯಾಲಯದಲ್ಲಿ ಹೇಳಿದ್ದೇನೆ ಅಂದರೆ, ಪ್ರಯತ್ನ ಮಾಡಿದ್ದೇನೆಂದು ಹೇಳುತ್ತಾಳೆ. ನಾನು ಚಿಕ್ಕಮಗಳೂರು ಪಾಲಿಸಿ ಕೊಡುವ ಅಧಿಕಾರಿಗೆ ಕೇಳಿರುತ್ತೇನೆ. ನಾನು ಕೇಳಿರುತ್ತೇನೆ, ಆದರೆ ಅವರು ಹಾಜರಪಡಿಸುವ ಬಗ್ಗೆ ಗೊತ್ತಿಲ್ಲ. ಲಿಖಿತವಾಗಿ ಅರ್ಜಿ ಕಳಿಸಿದರೆ ಅವರು ಕೊಡುತ್ತಿದ್ದರು ಅಂದರೆ ಸರಿ. ನಾನು ಲಿಖಿತವಾಗಿ ಏನು ಕೇಳಿಲ್ಲ. ನಮ್ಮ ಕಚೇರಿಯಲ್ಲಿ ಮೌಖಿಕವಾಗಿ ಹೇಳಿದರೆ ಕೇಳುತ್ತೇವೆ. ನಾನು ಸಾಕ್ಷಿ ಹೇಳುವದಕ್ಕಿಂತ ಪೂರ್ವದಲ್ಲಿ ಸಂಬಂದಪಟ್ಟ ದಾಖಲೆಗಳನ್ನು ಓದಿಕೊಂಡು ಬರಬೇಕೆಂದರೆ ಸರಿ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಓಡಿ ಕ್ಲೇಮ ಅರ್ಜಿ ಯನ್ನು ಓದಿಲ್ಲ. ಕಾರಣ ಅದು ಬೇರೆ ವಿಭಾಗದಲ್ಲಿದೆ. ಓ ಡಿ ಕ್ಲೇಮ ನಮ್ಮ ಕಂಪನಿಯಲ್ಲಿದೆ ಅಂದರೆ ಸರಿ, ಆದರೆ ವಿಭಾಗದಲ್ಲಿಲ್ಲ. ತಕರಾರು ಸಲ್ಲಿಸುವದಕ್ಕಿಂತ ಮುಂಚೆ ಎಲ್ಲಾ ದಾಖಲೆಗಳನ್ನು ನೋಡಿ ಸಲ್ಲಿಸಬೇಕಾಗುತ್ತದೆ ಅಂದರೆ ಸರಿ. ವಿಮೆ ಕಂಪನಿ ನ್ಯಾಯಾಲಯಕ್ಕೆ ಸತ್ಯ ಸಂಗತಿಗಳನ್ನು ತಿಳಿಸುವ ಜವಾಬ್ದಾರಿ ಇದೆ ಅಂದರೆ ಸರಿ. ನಾನು ತಕರಾರು ಸಲ್ಲಿಸುವ ಮುಂಚೆ ಪಾಲಿಸಿ ಕೊಡುವ ವಿಭಾಗದಲ್ಲಿ ಕೇಳಿಲ್ಲ. ಸಿಸ್ಟಮದಲ್ಲಿ ಓ ಡಿ ಕ್ಲೇಮ ಬಗ್ಗೆ ಕೇಳಿದ್ದೇನೆ. ಓ ಡಿ ಕ್ಲೇಮ ಶೆಟಲ್ ಆದ ಬಗ್ಗ ನ್ಯಾಯಾಲಯಕ್ಕೆ ತಿಳಿಸಿಲ್ಲ ಅಂದರೆ, ಅದು ಬೇರೆಯಾಗಿದ್ದರಿಂದ ತಿಳಿಸಿಲ್ಲ. ಓ ಡಿ ಕ್ಲೇಮ ಪ್ರಕರಣಕ್ಕೆ ಸಂಬಂಧಪಟ್ಟಿದೆ ಅಂದರೆ ಸರಿ. ಓ ಡಿ ಕ್ಲೇಮ ಮಾಡುವದಕ್ಕಿಂತ ಮುಂಚೆ ಕಂಪನಿ ಸರ್ವೆ ವರದಿ ತೆಗೆದಕೊಂಡಿದೆ ಅಂದರೆ ಸರಿ. ಸರ್ವೆ ವರದಿ ಪಡೆದುಕೊಂಡ ನಂತರ ಓಡಿ ಕ್ಲೇಮ ಶೆಟಲ್ ಆಗಿದೆ ಅಂದರೆ ಸರಿ.

**ECA 22-23** **RW-1**

ಓ ಡಿ ಕ್ಲೇಮ 5 ಲಕ್ಷದಾ 95 ಸಾವಿರ ರೂ. ಗಳು ಆಗಿದೆ ಅಂದರೆ, ಹಣ ಗೊತ್ತಿಲ್ಲ, ಶಟಲ್ ಆಗಿದೆ. ಸರ್ವೆಯರ ಯಾರೆಂದು ಗೊತ್ತಿಲ್ಲ. ಆ ದಾಖಲೆ ತಂದಿಲ್ಲ. ಸರ್ವೆಯರ ನಾಗೇಂದ್ರ ಕೊಟ್ಟ ವರದಿ ಬಗ್ಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಗೊತ್ತು, ಆದರೆ ಓ ಡಿ ಕ್ಲೇಮ ಬಗ್ಗೆ ಮಾತ್ರ ಗೊತ್ತಿಲ್ಲ. ನನ್ನದು 3 ನೇ ಪಕ್ಷಗಾರರ ವಿಭಾಗದಲ್ಲಿದ್ದೇನೆ. ಯುನೈಟೆಡ್ ವಿಮೆ ಕಂಪನಿ ಮ್ಯಾನೇಜರ ಗೆ ಎಲ್ಲಾ ವಿಷಯ ಗೊತ್ತಿರುತ್ತದೆ ಅಂದರೆ ಸರಿ. ಮ್ಯಾನೇಜರ ಬಂದರೆ ಸರಿಯಾದ ಉತ್ತರ ಕೊಡಬಹುದು ಅಂದರೆ ಗೊತ್ತಿಲ್ಲ. ನಾಗೇಂದ್ರ ಕೊಟ್ಟ ಸರ್ವೆ ವರದಿಯಲ್ಲಿ ನಾಗರಾಜ ರಾಮಣ್ಣ ಜಾಧವ ರವರು ಗಾಯಗಳಿಂದ ಮರಣ ಹೊಂದಿದ್ದಾರೆ ಹಾಗೂ ಜಖಂ ಬಗ್ಗೆ ಬರೆದಿದ್ದಾರೆ ಅಂದರೆ, ಜಖಂ ನೋಡಿ ಶಟಲ್ ಮಾಡಿರುತ್ತಾರೆಂದು ಹೇಳುತ್ತಾರೆ. ಎಲ್ಲಾ ದಾಖಲೆಗಳು ಹಾಗೂ ವರದಿಗಳನ್ನು ನೋಡಿ ಓ ಡಿ ಕ್ಲೇಮ ಶಟಲ್ ಆಗಿದೆ ಅಂದರೆ ಸರಿ. ಸರ್ವೆ ವರದಿ ಅನುಮಾನಸ್ಪದವಾಗಿದ್ದರೆ ಓ ಡಿ ಕ್ಲೇಮ ವಿಭಾಗ ಅರ್ಜಿಯನ್ನು ಕ್ಲೇಮ ನ್ನು ತಿರಸ್ಕಾರ ಮಾಡಬಹುದು. ಆದರೆ ನನಗೆ ಗೊತ್ತಿಲ್ಲ. ಓ ಡಿ ಕ್ಲೇಮ ವಿಭಾಗದವರು ಜಖಂ ಹಣ ಕೊಟ್ಟಿದ್ದಾರೆ ಅಂದರೆ ಸರಿ. ಎಲ್ಲಾ ದಾಖಲೆಗಳು ಸರಿಯಾಗಿರುವುದರಿಂದ ಓ ಡಿ ಕ್ಲೇಮ ಕೊಟ್ಟಿದ್ದಾರೆ ಅಂದರೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.